

ನಾನೆಲ್ಲಿಗೆ ಹೋಗಲಿ. ನೀನು ಭಾಗಶಃ ನನ್ನ ಕೊನೆಯ ಗಿರಾಕಿ. ನಾನೊಂಥರಾ ಯಮನ ಬಂಟ. ಆದರೂ ನೋಡು ನಿನ್ನನ್ನು ಗೌರವಾನ್ವಿತವಾಗಿ ಕರೆದೊಯ್ಯುತ್ತಿರುವೆ.'

'ಅಣ್ಣಾ, ಮನುಷ್ಯ ಎಷ್ಟು ಸಲ ಸಾಯುತ್ತಾನೆ ಎಷ್ಟು ಬಾರಿ ಹುಟ್ಟುತ್ತಾನೆ... ಪ್ರತಿಸಲ ಉಸಿರು ಬಿಟ್ಟಾಗಲು ಉಸಿರು ತೆಗೆದುಕೊಂಡಾಗಲೂ ಸಾಯ್ತಾ ಹುಟ್ತಾನೆ ಇರ್ತಾನೆ. ಯಾಕಿಷ್ಟು ಪರದಾಟ...'

'ನಿನ್ನನ್ನು ಅರ್ಧ ಶವ ಇನ್ನರ್ಧ ಜೀವ ಎಂದು ಕೊಂಡಿದ್ದೆ. ಇವೆರಡೂ ಒಟ್ಟಾಗಿಯೇ ನಿನ್ನಲ್ಲಿವೆ. ವೈರುಧ್ಯವೇ ಇಲ್ಲವಲ್ಲಾ... ನೀನೊಂದು ಬೇತಾಳನೇ ಸರಿ... ಆ ವಿಕ್ರಮನಿಂದ ತಪ್ಪಿಸಿಕೊಂಡು ಹಾರಿ ಹೋಗುವ ಪಿಶಾಚಿಯಾಗಲು ಬಿಡಲ್ಲ' ಎಂದು ಸವಾರ ಗಟ್ಟಿಯಾಗಿ ನುಡಿದ.

ದಾರಿ ಸಾಗುತ್ತಲೇ ಇತ್ತು. ದುರ್ಗಮವಾದ ಬೆಟ್ಟದ ಕೊರಕಲಿನ ತಿರುವಿನ ಇಕ್ಕಟ್ಟು ಜಾಡಿನಲ್ಲಿ ಏರಬೇಕಿತ್ತು. ಎಳೆಯಲು ಎಂಜಿನ್ ಕರ್‍ರೋ ಎಂದು ಅರಚುತ್ತಿತ್ತು. ಇವರಿಬ್ಬರನ್ನು ಈ ಕೊರಕಲಿಗೆ ಉರುಳಿಸಿ ಬಿಡಲೇ ಎಂದು ಎಂಜಿನ್ನಿಗೆ ಸಿಟ್ಟು ಬಂತಾದರೂ ಸವಾರನ ಹಂಗಿನಲ್ಲಿತ್ತು. ಆ ಯಂತ್ರಕ್ಕೂ ಅವರ ಜೊತೆ ಏನೋ ಸಂಬಂಧ ಆಗಿಬಿಟ್ಟಿತ್ತು. ತಿರುವು ದಾಟಿ ಮುಂದೆ ಬಂದು ಸವಾರ ನಿಲ್ಲಿಸಿದ. ಕುಂಟ ಕೆಳಗಿಳಿದು ಟಯರುಗಳ ಪರಿಶೀಲಿಸಿದ. ಅವು ಆದಿಮ ಯುಗದಿಂದಲೂ ಮಾನವರ ಜೊತೆ ಉರುಳುರುಳಿ ದಾರಿ ಸವೆಸಿ ಬಂದಿರುವಂತೆ ಕಂಡವು. ಆ ಹೊತ್ತು ಇಳಿದಿತ್ತು. ಕತ್ತಲಾಗಿತ್ತು. ಬೆಂಕಿ ಹಚ್ಚಿದರು. ನಿರ್ಜನ ಪ್ರದೇಶ. ನಿಶಾಚರಿಗಳು ಅವರ ತಲೆ ಮೇಲೆ ಹಾರಿ ಹೋಗುತ್ತಿದ್ದವು. ಕಗ್ಗತ್ತಲ ನೀರವ ಮೌನದಲ್ಲಿ ಆಕಾಶವ ದಿಟ್ಟಿಸುತ್ತಾ ತಾರಾ ಮಂಡಲಗಳ ಗ್ರಹಿಸುತ್ತಿದ್ದರು.

'ಅಣ್ಣಾ... ಈ ಆಕಾಶ ಯಾವಾಗ ಹುಟ್ಟಿತಣ್ಣ'

'ಅದಕ್ಕೆ ಹುಟ್ಟೂ ಇಲ್ಲ ಸಾವೂ ಇಲ್ಲ'

'ಸೃಷ್ಟಿ ಲಯವೂ ಇರುತ್ತದಲ್ಲಣ್ಣಾ'

'ಲಯ ಎಂದರೆ ಏನೆಂದುಕೊಂಡೆ...ಅದು ಚಲನೆಯ ಚಲನೆ.'

'ಒಂದೊಂದ್ಸಲ ನೀನು ಮಾತಾಡೋದೆ ಅರ್ಥ ಆಗಲ್ಲ...'

'ನಿಸರ್ಗ ಮಾತಾಡುತ್ತಾ... ಅದರ ಮಾತು ತಿಳಿಯುತ್ತಾ...'

'ಹೌದಣ್ಣಾ; ಮಿಂಚು ಗುಡುಗು, ಮಳೆ, ಚಳಿ, ಬಿಸಿಲು ಬೆಂಕಿ ಅದೂ ಇದೂ ಎಲ್ಲಕ್ಕೂ ಭಾಷೆ ಇದೆ ಅಲ್ಲವೇ...'

'ಓಹೋ... ವೇದಾಂತಿ ಕಣಯ್ಯಾ ನೀನು... ಆಕಾಶದ ಜೊತೆ ಮಾತಾಡಿದ್ದೀಯಾ...'

'ಸತ್ಯವಾಗ್ಲೂ ಮಾತಾಡಿದ್ದೀನಣ್ಣಾ... ನಕ್ಷತ್ರಗಳು ನನ್ನ ನೋಡಿ ನಕ್ಕಿವೆ...'

'ಮತ್ತೆ ಮನುಷ್ಯರ ಆಯುಷ್ಯ, ಅವರ ಸ್ವರ್ಗ ನರಕನೆಲ್ಲ ಯಾಕೆ ಕೇಳ್ತಿಯೆ?'

'ಹಾಗದ್ರೆ ನೀನ್ಯಾಕಣ್ಣ ಸಾವಿನ ಜೊತೆ ಸಂಸಾರ ಮಾಡ್ತಿಯೇ...'

'ನಾಳೆ ಮಾತಾಡುವ ಮಲಗು... ಮಧ್ಯರಾತ್ರಿ ಮೀರುತ್ತಿದೆ.'

ಧಾರಾಕಾರ ಮಳೆಯಂತೆಯೋ ಸಾವು ಬಂದು ಅವಿತುಕೊಂಡಂತೆಯೋ ಇಬ್ಬರಿಗೂ ನಿದ್ದೆ ಬಂದಿತ್ತು.